ನಾನು ಶುಷ್ಕವಾಗಿ ನಕ್ಕು, "ಬಹುಶಃ ನಾನು ಬೆಂಕಿಯಾಗಿದ್ದರೆ ನೀನು ಎಲ್ಲೂ ಹೋಗುತ್ತಿರಲಿಲ್ಲವೇನೂ" ಅಂದೆ. "ಅಯ್ಯೋದೇವರೆ, ಸದ್ಯ ನೀವು ಬೆಂಕಿಯಾಗುವುದೇ... ಎಷ್ಟು ಮಾತ್ರಕ್ಕೂ ಬೇಡ. ನಂದಾದೀಪ ನಂದಾದೀಪವಾದ್ದರೇನೆ ಚೆನ್ನ. ಅದು ಎಂದೂ ಬೆಂಕಿಯಾಗಬಾರದು" ಎಂದಳು. ನಿಟ್ಟುರಿಸಿಟ್ಟು "ಯಾಕೆ? ಬೆಂಕಿಯಲ್ಲಿ ಬಿದ್ದ ಮೇಲೆ ಅದು ಬೇಸರವಾಯಿತೇನೋ"ಎಂದೆ ವ್ಯಂಗ್ಯವಾಗಿ. "ಇಲ್ಲ ನನ್ನ ದೊರೆಯೆ, ಬೆಂಕಿಗೆ ಯಾವುದರ ಪರಿವೆಯೂ ಇರುವುದಿಲ್ಲ. ಕಾಮಾಗ್ನಿಗೆ ಹೆಣ್ಣು ಗಂಡಿನ ವ್ಯತ್ಯಾಸ ಮಾತ್ರ ಗೊತ್ತಿರುತ್ತದೆ. ಉಳಿಕೆ ಏನೂ ಇಲ್ಲ. ಅಥವಾ ಎಲ್ಲವೂ ಒಂದೆ" ಎಂದಳು ಹಲುಬುತ್ತಾ. "ಅಂದರೆ?..." ಎಂದೆ ಅಚ್ಚರಿಯಿಂದ. "ಅಕ್ಕ, ತಂಗಿ, ಮಗಳು, ಸೊಸೆ ಎಂದೆಲ್ಲ ಭಾವಿಸಲು ಆಗುವುದು ಬೆಂಕಿಗೆ ಸಾಧ್ಯವಿಲ್ಲವಲ್ಲ" ಎಂದಳು ಒಗಟಾಗಿ. ನನಗೆ ಏನೋ ಸುಳಿವು ಸಿಕ್ಕು "ಆ ನಿನ್ನ ವಿಠ್ಠಲ ರಾವ್ ಬೇರೆ ಹೆಣ್ಣನ್ನೇನಾದರೂ..." ಎಂದು ಒಗೆದು ಕೇಳಿದಾಗ "ಹೌದು ನಿಮ್ಮ ಊಹೆ ಸರಿಯಾಗೇ ಇದೆ. ಬೇರೊಂದು ಹೆಣ್ಣನ್ನು ನೋಡಿಕೊಂಡು ಅದೆಷ್ಟೋ ವರ್ಷಗಳಾಯಿತು. ಆಗಿನಿಂದ ನಾನು ಒಂಟಿಯಾಗೇ ಇದ್ದೀನಿ" ಎಂದಳು.

"ಹೌದಾ! ಯಾರವಳು?" ಎಂದೆ ಕೌತುಕದಿಂದ "ಅದೊಂದನ್ನು ಮಾತ್ರ ಕೇಳಬೇಡಿ ನನ್ನ ದೇವರೆ, ಹೇಳಿದ ಮೇಲೆ ನಾನು ಉಳಿಯಬಾರದು. ಕೇಳಿದ ನೀವೂ" ಎಂದಳು ಅಳುತ್ತಾ. "ಯಾಕೆ ಸುಶೀ ಅಂಥದ್ದೇನಾಯ್ತು?" ಎಂದಾಗ, "ಪಾಪಿ, ದರಿದ್ರ ಪಾಪಿಯವನು, ಅವನೊಳಗಿನ ಬೆಂಕಿ ನಂಬಿಕೊಂಡು ಹಿಂದೆ ಬಿದ್ದದ್ದಕ್ಕೆ ತಕ್ಕುದಾದದ್ದನ್ನೇ ಕೊಟ್ಟಿದ್ದಾನೆ. ನಾನು ಹೇಳಲಿಲ್ಲವೆ? ಬೆಂಕಿಗೆ ಸಂಬಂಧಗಳಿರುವುದಿಲ್ಲವಂತ" ಎಂದಳು ಗಾಢ ವಿಷಾದದಿಂದ.

"ಹಾಗೇನಾಯಿತು ಆಗಬಾರದ್ದು? ಹೇಳಿ ಬಿಡಲ್ಲ"ಎಂದೆ ನಿಷ್ಠುರನಾಗಿ.

"ಅಲ್ಲ ದೊರೆ, ನೀವು ನಮ್ಮ ಪಾಪೂನ ಫೋಟೊ ನೋಡಿದಿರಿ, ಅವಳ ಮಗನದ್ದೂ ಚಿತ್ರ ನೋಡಿದಿರಿ. ಅವಳ ಗಂಡನ ಫೋಟೊ ನೋಡಲೇ ಇಲ್ಲವಲ್ಲ" ಎಂದಾಗ, "ನೋಡಿದ್ದೆ, ಪಾಪು ಅವಳ ಗಂಡ ಇರುವ ಫೋಟೊ ನೀನೆ ಕಳಿಸಿದ್ದೆಯಲ್ಲ" ಎಂದೆ. "ಅದು ಯಾವಾಗಿನ ಮಾತು ದೇವರೆ? ಅವಳ ಮದುವೆಯ ಫೋಟೊ ಅದು. ಆಮೇಲವಳು ಅವಳ ಗಂಡನನ್ನು ಬಿಟ್ಟು ಮನೆಗೇ ಬಂದು ಬಿಟ್ಟಳು. ಅಂಕಲ್ ಎನಿಸಿಕೊಂಡಿದ್ದವನು ಅವಳನ್ನು ಬೆಳ್ಳಿಸಿ ಕಿಚ್ಚು ಹಚ್ಚಿಬಿಟ್ಟು... ಥೇಟ್ ನನ್ನನ್ನು ಬೆಳ್ಳಿಸಿದ ಹಾಗೇ... ಬೆಂಕಿಯ ಬಾಯಿಗೆ ಬಿದ್ದವರು ಯಾರೂ ಉಳಿಯುವುದಿಲ್ಲವಲ್ಲ. ನಾನದೆಷ್ಟೋ ತಿಳಿಹೇಳಿದೆ. ಅವಳು ನಿನ್ನ ಮಗಳ ಸಮಾನ ಎಂದೆ. ಅವಳೇನು ಮಗಳಲ್ಲವಲ್ಲ ನನಗೆ, ನಿನ್ನಿಂದಲಂತೂ ನನಗೆ ಮಕ್ಕಳಾಗುವುದಿಲ್ಲ. ಅವಳಿಂದ ಒಂದು ಮಗುವನ್ನು ಪಡೆದು ಸುಖವಾಗಿರ್ತೀನಿ. ನೀನೇನೂ ಹೇಳಿದರೂ ಕೇಳುವುದಿಲ್ಲ ಎಂದುಬಿಟ್ಟ. ನನ್ನ ಕಣ್ಣೆದುರೇ ಪಾಪೂನ ಜೊತೆ ಸಂಸಾರ ಮಾಡಿಕೊಂಡಿದ್ದ. ಆಮೇಲೆ ನಾನೇ ಅವರಿಬ್ಬರನ್ನು ಹೈದರಾಬಾದಿಗೆ ಕಳಿಸಿದೆ. ಪಾಪೂ ಕೆಲಸ ಮಾಡುತ್ತಾಳೆ. ಇವನು ಈಗಲೂ ಆ ಫ್ಯಾಷನ್ ಡಿಸೈನಿಂಗ್ ಮಾಡಿಕೊಂಡೇ ಇದ್ದಾನೆ. ರಜೆಗೆ ಮನೆಗೆ ಬರುತ್ತಾರೆ. ಮಗುವಿಗೆ ನನ್ನನ್ನು ಅಜ್ಜಿ ಎಂದೇ ಹೇಳಿ ಕೊಟ್ಟಿದ್ದಾರೆ" ಎಂದಳು ಹಲುಬುತ್ತಾ.

ನನ್ನ ನರಮಂಡಲದ ಎಲ್ಲಾ ತಂತುಗಳೂ ಪಟಪಟನೆ ಸಿಡಿದು ಹೋದಂತೆನಿಸಿ ಕುಳಿತುಬಿಟ್ಟಾಗ, "ನನಗ್ಗೊತ್ತು ದೇವರೆ ನೀವಿದನ್ನು ತಡಕೊಳ್ಳಲಾರಿರಿ, ಸತ್ಯ ಕಹಿ ಆದರಿದು ವಿಷಸತ್ಯ" ಎನ್ನುತ್ತಾ ಅವಳ ಮೊಬೈಲಿನೊಳಗಿದ್ದ ಫೋಟೊವನ್ನು ತೆಗೆದು ತೋರಿದಳು. ವಿಠ್ಠಲ ರಾವ್, ಪಾಪು ಮತ್ತು ಮಗು ನಗುತ್ತಾ ನಿಂತಿದ್ದರು. ನನ್ನೊಳಗೆದ್ದ ಜ್ವಾಲಾಮುಖಿ ಸಿಡಿದು "ಏ... ಕತ್ತೆಮುಂಡೆ, ನನ್ನ ಮಗಳು ನನ್ನ ಹತ್ತಿರ ಇದ್ದಿದ್ದರೆ ಅವಳಿಗೊಂದು ಬದುಕು ಕಟ್ಟಿಕೊಡುತ್ತಿದ್ದನಲ್ಲೆ. ಇಂಥ ಹಲ್ಕ ಸಾವಾಸ ಮಾಡಿ ಅವಳನ್ನು ಹೇಲುಗುಂಡಿಗಿಳಿಸಿ ಬಿಟ್ಟೆಯಲ್ಲೇ" ಎಂದು ಅವಳ ಕಪಾಳಕ್ಕೊಂದು ಬಾರಿಸಿದೆ.